ಆ) ಕೊಡಗು 4393 ಎಕರೆಗಳು

ಹಾಸನ 42958 ಎಕರೆಗಳು

ಚಿಕ್ಕಮಗಳೂರು 20,704 ಎಕರೆಗಳು

ಸೋಮವಾರಪೇಟೆ ತಾಲ್ಲೂಕಿನ ಕೃಷಿ ಮಾರುಕಟ್ಟೆ ಕಾಮಗಾರಿಗೆ ಬಿಡುಗಡೆಯಾದ ಹಣ

506 (803) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿ ಕೃಷಿ ಮಾರುಕಟ್ಟೆ ವತಿಯಿಂದ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಅವು ಯಾವುವು, ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ವಿವರಗಳನ್ನು ಒದಗಿಸುವುದು).

ಶ್ರೀ ಹೆಚ್ ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಸೋಮವಾರಪೇಟೆ ಉಪ ಮಾರುಕಟ್ಟೆಯಲ್ಲಿ ರೂ.1.25 ಲಕ್ಷಗಳ ಅಂದಾಜಿನಲ್ಲಿ ಭೂಮಿ ಸಮತಟ್ಟು ಕೆಲಸ ಪ್ರಗತಿಯಲ್ಲಿದೆ. 3 ಗ್ರಾಮೀಣ ರಸ್ತೆ ಕಾಮಗಾರಿಗಳನ್ನು 95-96ನೇ ಸಾಲಿನಲ್ಲಿ ಅಂದಾಜು ರೂ.15.00 ಲಕ್ಷಗಳ ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು ಮೆಟಲಿಂಗ್ ಪೂರ್ತಿಯಾಗಿದ್ದು ಅಸ್ಫಾಲ್ಟಿಂಗ್ ಮಾಡಬೇಕಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ).

ಸಂಖ್ಯೆ	ಕಾಮಗಾರಿಯ ಹೆಸರು	ರಸ್ತೆ ಉದ್ದ ಕಿ.ಮೀ.	ಬಿಡುಗಡೆ ಮಾಡಿದ ಹಣ ರೂ.	ವೆಚ್ಚ ಮಾಡಿದ ಹಣ ರೂ.
1.	ಶುಂಠಿ ಕೊರಳ್ಳಿ - ಮಂಗಳೂರು ರಸ್ತೆ ಅಭಿವೃದ್ಧಿ	2.53	6.75	2.890
2.	ಮಾದಾಪಟ್ಟಣ- ಗಂಧದ ಕೋಟೆ ರಸ್ತೆಯ ಅಭಿವೃದ್ಧಿ	1.50	3.75	0.990
3.	ಗರಗಂಧೂರು ಕುಂಬಾರವಾಣಿ ರಸ್ತೆ ಅಭಿವೃದ್ಧಿ	1.70	4.50	1.069
		5.73	15.00	4.949

1996-97ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಯಡಿಯಲ್ಲಿ ಕುಶಾಲನಗರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ.

1. ಗೋದಾಮು ನಿರ್ಮಾಣ 200 ಮೆ.ಟ. ಸಾಮಾರ್ಥ್ಯ -1	7.00 ಲಕ್ಷ
2. ಹರಾಜು ಕಟ್ಟೆಗಳನ್ನು ಗೋದಾಮು ಗಳನ್ನು ಪರಿವರ್ತಿಸುವುದು	3.00 ಲಕ್ಷ
	10.00 ಲಕ್ಷ

ರಾಜ್ಯದಲ್ಲಿ ಕೃಷಿ ಸೇವಕರ ನೇಮಕಾತಿ

507 (804) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1-4-96 ರಿಂದ ಇಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿ ಕೃಷಿ ಇಲಾಖೆಗೆ ಎಷ್ಟು ಜನ ಕೃಷಿ ಸೇವಕರ ನೇಮಕಾತಿ ಮಾಡಲಾಗಿದೆ?

ಆ) ಒಂದು ಪಂಚಾಯಿತಿಗೆ ಒಂದು ಕೃಷಿ ಸೇವಕರ ಹಾಗೆ ಎಷ್ಟು ಹುದ್ದೆ ಬಾಕಿ ಇದೆ (ವಿವರ ನೀಡುವುದು);

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ನೇಮಕಾತಿ ಮಾಡಿರುವುದಿಲ್ಲ.

ಆ) ಇಲಾಖೆಯಲ್ಲಿ 1132 ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ. 1132 ಗ್ರಾಮ ಪಂಚಾಯಿತಿಗಳಲ್ಲಿ ಕೃಷಿ ಸಹಾಯಕರ ಹುದ್ದೆಗಳು ಖಾಲಿಯಾಗಿದ್ದು ಈ ಹುದ್ದೆಗಳನ್ನು ಇಲಾಖಾ ಪುನರ್ ರಚನೆ ಆದೇಶದನ್ವಯ 2 ಕೃಷಿ ಸಹಾಯಕರುಗಳಿಗೆ (2:1) ಅನುಪಾತದಲ್ಲಿ ಪದವೀಧರ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗೆ ಪರಿವರ್ತಿಸಲು ಪ್ರಸ್ತಾಪಿಸಲಾಗಿದೆ. ಆದ್ದರಿಂದ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕೃಷಿ ಸಹಾಯಕರ ಹುದ್ದೆಗಳು ಖಾಲಿಯಾಗಿ ಉಳಿಯುವ ಪ್ರಶ್ನೆ ಉದ್ಭವಿಸುವುದಿಲ್ಲ ಮತ್ತು ಈ ಹುದ್ದೆಗೆ ನೇಮಕಾತಿ ಅವಕಾಶ ಕಲ್ಪಿಸಿಕೊಂಡಿರುವುದಿಲ್ಲ.

ರಾಜ್ಯದಲ್ಲಿ ರಸ್ತೆ ಸಾರಿಗೆ ರಾಷ್ಟ್ರೀಕರಣವಾಗದ ಜಿಲ್ಲೆಗಳು

510 (944) ಶ್ರೀ ಅಶ್ವತ್ಥ ನಾರಾಯಣ ರೆಡ್ಡಿ (ವರ್ತೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡಲಾಗಿರುವ ಜಿಲ್ಲೆಗಳಾವುವು; ರಾಷ್ಟ್ರೀಕರಣವಾದ ಜಿಲ್ಲೆಗಳಾವುವು?